ಓ.ಎಸ್.ನಂ.48-2012

ಡಿ.ಡಬ್ಲು-೧

ದಿ: 29.01.2026 ರಂದು ೩ನೇ ಪ್ರತಿವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲು**</u>: ವಾದಿ ಪರ ಶ್ರೀಯುತ ಕೆ.ವಿ.ಕೆ. ವಕೀಲರಿಂದ.

ಸರ್ವೆ ನಂ.30 ಜಮೀನಿನ ಒಟ್ಟು ವಿಸ್ತೀರ್ಣ 4 ಎಕರೆ 22 ಗುಂಟೆ ಇರುತ್ತದೆ. ಸರ್ವೆ ನಂ.30 ಜಮೀನು ನೀರಗಂಟಿ ಇನಾಮ್ತಿ ಜಮೀನು ಆಗಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂ.30 ಜಮೀನಿನ ಒಟ್ಟು ವಿಸ್ತೀರ್ಣ ಪೈಕಿ 0.30 ¼ ಗುಂಟೆ ಜಮೀನ್ನನ್ನು ೧ನೇ ಪ್ರತಿವಾದಿಯ ಅಜ್ಜಿಯಾದ ಮುತ್ಯಾಲಮ್ಮ ರವರಿಗೆ ಮಂಜೂರು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.30 ವಿಸ್ತೀರ್ಣ 0.30 ¼ ಗುಂಟೆ ಜಮೀನಿನ ಚಕ್ಕುಬಂದಿಗಳು ತಿಳಿದಿವೆ ಮತ್ತು ಅವುಗಳು ಪೂರ್ವಕ್ಕೆ ಮುನಿಗರವರ ಜಮೀನು, ಪಶ್ಚಿಮಕ್ಕೆ ಕುಂಬಳಹಳ್ಳಿ ಜಯರಾಮ, ಈರಣ್ಣ ಮತ್ತು ಮುನಿಯಪ್ಪರವರ ಜಮೀನು, ಉತ್ತರಕ್ಕೆ ಚಿಕ್ಕಮುನಿವೆಂಕಟಪ್ಪ ಮತ್ತು ವೇಣುಗೋಪಾಲರವರ ಜಮೀನು ಮತ್ತು ದಕ್ಷಿಣಕ್ಕೆ ಕಾಲುವೆ ಇರುತ್ತದೆ. ಸದರಿ ಉತ್ತರ ದಿಕ್ಕಿನಲ್ಲಿ ಇದೆ ಎಂದು ಹೇಳುವ ಚಿಕ್ಕ ಮುನಿವೆಂಕಟ್ಟಪ್ಪ ಮತ್ತು ವೇಣುಗೋಪಾಲರವರ ಜಮೀನು ನನ್ನ ಜಮೀನಾಗಿರುತ್ತದೆ ಎಂದರೆ ಸರಿ.

2. ದಿ: 18.12.1997 ರಂದು ನಾನು ಜಮೀನ್ನನ್ನು ಖರೀದಿಸಿರುತ್ತೇನೆ. ಸರ್ವೆ ನಂ.30 ವಿಸ್ತೀರ್ಣ 0.30 ¼ ಗುಂಟೆ ಜಮೀನ್ನನ್ನು ಮುತ್ಯಾಲಮ್ಮ ಕೋಂ ಮುತ್ಯಾಲಪ್ಪ ಬಿನ್ ದೇಕಪ್ಪರವರಿಗೆ ಮಂಜೂರು ಮಾಡಲಾಗಿರುತ್ತದೆ ಎಂದರೆ ಸರಿ. ನನಗೆ ಮಾಡಿಕೊಟ್ಟಿದ್ದಾರೆ ಎನ್ನುವ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಗೆ ಪ್ರತಿವಾದಿ ಪರ ನಿಶಾನೆಕರಿಸಲಾದ ದಾಖಲೆಗಳನ್ನು ತೋರಿಸಿ ಕ್ರಯ ಪತ್ರವನ್ನು ನೋಡಿ ಗುರುತಿಸುವಂತೆ ಸೂಚಿಸಿದ ಮೇರೆಗೆ ಸಾಕ್ಷಿಯು ದಾಖಲೆಗಳನ್ನು ನೋಡಿ ನಿ.ಡಿ.3 ಎಂದು ನುಡಿಯುತ್ತಾರೆ. ಸದರಿ ನಿ.ಡಿ.3 ದಾಖಲೆಯು ನನಗೆ ಮಾಡಿಕೊಟ್ಟಿದ್ದಾರೆ ಎಂದು ಹೇಳುವ ಕ್ರಯ ಪತ್ರ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಹೊಸಕೋಟೆ ಉಪನೊಂದಾಣಾಧಿಕಾರಿ ಕಛೇರಿಯಲ್ಲಿ ಕ್ರಯ ಪತ್ರ ಮಾಡಲಾಗಿದ್ದು ಮತ್ತು ಅಪಮೌಲ್ಯವಾಗಿದ್ದ ಮೇರೆಗೆ ಜಿಲ್ಲಾ ನೊಂದಾಣಾಧಿಕಾರಿಗಳ ನ್ಯಾಯಾಲಯಕ್ಕೆ ಪ್ರಕರಣ ನೊಂದಣಿ ಆದ ಮೇರೆಗೆ ಹೆಚ್ಚುವರಿ ದಂಡವನ್ನು ಪಾವತಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.10 ಮತ್ತು ನಿ.ಡಿ.3 ರಲ್ಲಿರುವ ಮುತ್ಯಾಲಮ್ಮರವರ ಸಹಿಗಳಲ್ಲಿ ವ್ಯತ್ಯಾಸಗಳಿವೆ ಎಂದರೆ ಸರಿಯಲ್ಲ.

3. ನನಗೆ ಮುತ್ಯಾಲಮ್ಮ ಗಂಡ ಮುನಿಯಪ್ಪ ಯಾನೆ ಗುಲ್ಲೇಳಪ್ಪರವರು ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ.12 ಮತ್ತು ನಿ.ಡಿ.54 ರಲ್ಲಿರುವ ಮುತ್ಯಾಲಮ್ಮರವರು ನನಗೆ ಕ್ರಯ ಪತ್ರ ಬರೆದುಕೊಟ್ಟ ಮುತ್ಯಾಲಮ್ಮ ಆಗಿರುತ್ತಾರೆ ಎಂದರೆ ಸರಿ. ನಿ.ಡಿ.5 ರಲ್ಲಿರುವ ಸಹಿ ಮುತ್ಯಾಲಮ್ಮರವರ ಸರಿಯಾದ ಸಹಿ ಆಗಿರುತ್ತದೆ ಎಂದರೆ ಸರಿ. ನಿಪಿ.11 ರ ಭಾಗದ ಸಂಖ್ಯೆ 86 ರ ಕ್ರಮ ಸಂಖ್ಯೆ 79 ರಲ್ಲಿರುವ ಮುತ್ಯಾಲಮ್ಮ ಗಂಡ ಗುಳ್ಳೆಳ್ಳಪ್ಪರವರು ಮತ್ತು ಮುತ್ಯಾಲಪ್ಪ ಬಿನ್ ಗುಳ್ಳೆಳ್ಳಪ್ಪರವರು ನನಗೆ ಕ್ರಯ ಪತ್ರ ಬರೆದುಕೊಟ್ಟವರು ಎಂದರೆ ಸರಿ. ನಿ.ಪಿ.10 ರಲ್ಲಿ ಮುತ್ಯಾಲಪ್ಪರವರ ಮಗಳು ಹಾಗೂ ದೇಕಪ್ಪರವರ ಧರ್ಮಪತ್ನಿಯಾದ ಮುತ್ಯಾಲಮ್ಮ ಮತ್ತು ಮುತ್ಯಾಲಮ್ಮರವರ ಮಗ ಮುತ್ಯಾಲಪ್ಪರವರು ಕ್ರಯ ಪತ್ರ ಬರೆದುಕೊಟ್ಟಿರುವುದಾಗಿ ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಆ ರೀತಿ ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ನಿಪಿ.10 ರಲ್ಲಿ ತಪ್ಪಾಗಿ ನಮೂದು ಮಾಡಲಾಗಿದೆ ಎನ್ನುವ ಕುರಿತು ತಿದ್ದುಪಡಿ ಕ್ರಯ ಪತ್ರವನ್ನು ಮಾಡಿಕೊಂಡಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆ ರೀತಿ ತಿದ್ದುಪಡಿ ಕ್ರಯ ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಬರೆದುಕೊಟ್ಟ ಇಬ್ಬರು ಮೃತಪಟ್ಟಿದ್ದರು ಎಂದು ನುಡಿಯುತ್ತಾರೆ.

4. ನಾನು ಪ್ರಸ್ತುತ ದಾವೆಯಲ್ಲಿರುವ ೧ನೇ ಪ್ರತಿವಾದಿಗೆ ತಿದ್ದುಪಡಿ ಪತ್ರವನ್ನು ಮಾಡಿಕೊಡುವಂತೆ ನೋಟಿಸ್ಸು ನೀಡಿರುತ್ತೇನೆ ಮತ್ತು ಅವರು ಬರೆದುಕೊಟ್ಟಿರುವುದಿಲ್ಲ. ಆ ರೀತಿ ನೀವು ನೀಡಿದ್ದೀರಿ ಎಂದು ಹೇಳುವ ನೋಟಿಸ್ಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮೌಖಿಕವಾಗಿ ತಿಳಿಸಿದ್ದೆ ಎಂದು ನುಡಿಯುತ್ತಾರೆ.

**ಮುಂದುವರೆದ ವಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.